**ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ (ರಿ), ಬೆಂಗಳೂರು – 560 023.**

**ದಿನಾಂಕ: 24-11-2024 – ಭಾನುವಾರ**

# 20ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯ

## ಸಚಿತ್ರಗಳ ಪಕ್ಷಿ ನೋಟ

ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘವು ತನ್ನ 20ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯನ್ನು ದಿನಾಂಕ: 24-11-2024 ರಂದು ಭಾನುವಾರ ಸಂಜೆ 04-00 ಗಂಟೆಯಿಂದ ಸಂಘದ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು.











ಕಾರ್ಯಕ್ರಮದ ಆರಂಭಕ್ಕೂ ಮೊದಲು ಆಗಮಿಸಿದ್ದ ಎಲ್ಲ ಸದಸ್ಯರಿಗೆ ಕಾಫಿ/ಟೀ ಜೊತೆಗೆ ಲಘು ಉಪಹಾರವನ್ನು ಏರ್ಪಡಿಸಲಾಗಿತ್ತು.



















ಅಪರೂಪಕ್ಕೆ ಭೇಟಿಯಾದ ಸಹಪಾಠಿಗಳು, ಸಹೋದ್ಯೋಗಿಗಳು, ಹಿರಿಯ/ಕಿರಿಯ ನಿವೃತ್ತ ಅಧಿಕಾರಿಗಳು ಪರಸ್ಪರ ಕುಶಲೋಪರಿ ವಿಚಾರಿಸುತ್ತಾ ಸಂಜೆಯ ಲಘು ಉಪಹಾರ ಹಾಗೂ ಕಾಫಿ/ಟೀ ಯನ್ನು ಸವಿದರು.

**ಸಂಜೆಯ ಲಘು ಉಪಹಾರದ ನಂತರ ಆಗಮಿಸಿದ್ದ ಸದಸ್ಯರೆಲ್ಲರೂ ತಮ್ಮ ಆಗಮನವನ್ನು ಖಚಿತಪಡಿಸಲು ನೋಂದಣಾ ಪ್ರಕ್ರಿಯೆಯಲ್ಲಿ ಭಾಗವಹಿಸಿ ತಮ್ಮ ಹೆಸರುಗಳನ್ನು ನೋಂದಾಯಿಸಿದ ಸಂದರ್ಭದ ಕೆಲವು ಚಿತ್ರಗಳು...**

















ಕಾರ್ಯಕ್ರಮದ ನಿರೂಪಕರಾದ ಶ್ರೀ ಎಂ. ವಿ. ಶೇಷನ್, ಉಪಾಧ್ಯಕ್ಷರು, ಇವರು ಸಭೆಯಲ್ಲಿ ಹಾಜರಿದ್ದ ಸರ್ವರಿಗೂ ನಮಸ್ಕರಿಸುತ್ತಾ ಸಭೆಯನ್ನು ಆರಂಭಿಸಿದರು.





ಪ್ರತೀತಿಯಂತೆ ಉದ್ಘಾಟನೆಯ ನಂತರ ಕಾರ್ಯಕಾರೀ ಸಮಿತಿ ಸದಸ್ಯರಾದ ಶ್ರೀ ಬಿ. ಎನ್. ಕೃಷ್ಣಮೂರ್ತಿ ಯವರಿಂದ ಪ್ರಾರ್ಥನಾ ಕಾರ್ಯಕ್ರಮ ಶುಭಾರಂಭವಾಯಿತು.







ಸಂಘದ ಹಿರಿಯ ಸದಸ್ಯರುಗಳು, ಸಂಘದ ಮಾರ್ಗದರ್ಶಿಗಳು, ಅಧ್ಯಕ್ಷರೂ ಆದ ಶ್ರೀ ಕೆ. ಬಿ. ಬೆಟ್ಟೇಗೌಡ ರವರು, ಪದಾಧಿಕಾರಿಗಳೊಂದಿಗೆ ಜ್ಯೋತಿ ಬೆಳಗಿಸುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಲಾಯಿತು.





ಪ್ರಸ್ತುತ ವರ್ಷದಲ್ಲಿ ಸ್ವರ್ಗಸ್ಥರಾದ 4 ಜನ ನಿವೃತ್ತ ಪೊಲೀಸ್ ಅಧಿಕಾರಿಗಳಾದ ಶ್ರೀ ಎಸ್.ಜೆ. ಹನುಮಂತೇಗೌಡ, ಡಿ.ಎಸ್.ಪಿ (ನಿ), ಶ್ರೀ ಬಿ.ಎಸ್. ಬಸವರಾಜು, ಎಸಿಪಿ (ನಿ), ಶ್ರೀ ಎಂ. ಬೈಲಪ್ಪ, ಎಸ್.ಪಿ. (ನಿ), ಶ್ರೀ ಎಂ. ಗಂಗೀರೆಡ್ಡಿ, ಎಸ್.ಪಿ (ನಿ) ರವರುಗಳನ್ನು ಸ್ಮರಿಸಿ ಅವರ ಆತ್ಮಕ್ಕೆ ಚಿರಶಾಂತಿಯನ್ನು ಹಾಗೂ ಅವರ ಕುಟುಂಬ, ಬಂಧು-ಮಿತ್ರರಿಗೆ ಮೃತರ ಅಗಲುವಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ನೀಡಲೆಂದು ದೇವರನ್ನು ಪ್ರಾರ್ಥಿಸುತ್ತಾ ಸಭೆಯು ಒಂದು ನಿಮಿಷ ಮೌನಾಚರಣೆಯನ್ನು ಸಲ್ಲಿಸಿತು.

**ಸಂಘದ ಉಪಾಧ್ಯಕ್ಷರಾದ ಶ್ರೀ ಜಿ. ಸಿ. ಮಂಜುನಾಥ್ ರವರು, ಸಂಘದ 2024 ನೇ ಸಾಲಿನ ಸರ್ವ ಸದಸ್ಯರ ಮಹಾಸಭೆಗೆ ಆಗಮಿಸಿದ್ದ ಸಂಘದ ಹಿರಿಯ/ಕಿರಿಯ ಸದಸ್ಯರೂ ಸೇರಿದಂತೆ ಎಲ್ಲರಿಗೂ ಸಂಘದ ಅಧ್ಯಕ್ಷರು ಹಾಗೂ ಎಲ್ಲಾ ಪದಾಧಿಕಾರಿಗಳ ಪರವಾಗಿ ಹಾರ್ದಿಕವಾದ ಸ್ವಾಗತವನ್ನು ಕೋರಿದರು.**







**ಸಂಘದ ಸದಸ್ಯರಲ್ಲಿ ಈ ಬಾರಿ 80 ವರ್ಷಕ್ಕೂ ಮೇಲ್ಪಟ್ಟ 21 ಜನ ಹಿರಿಯ ಸದಸ್ಯರನ್ನು ಸನ್ಮಾನಿಸಲು ಆಹ್ವಾನಿಸಲಾಗಿತ್ತು. ಆದರೆ ಕಾರಣಾಂತರಗಳಿಂದ ಕೆಲವರು ಆಗಮಿಸಲು ಸಾಧ್ಯವಾಗಲಿಲ್ಲ. ಅದರಲ್ಲಿ ಶ್ರೀ ವಿನ್ಸೆಂಟ್ ಕಾರ್ವೆಲ್ಹೋ ಡಿ.ಎಸ್.ಪಿ (ನಿ), ಶ್ರೀ ಮೆಹಬೂಬ್ ಜಾನ್, ಎ.ಸಿ.ಪಿ. (ನಿ), ಶ್ರೀ ಬಿ.ಜಿ. ಮಲ್ಲಾಪುರ್ ಡಿ.ಐ.ಜಿ. (ಪ್ರಿಸನ್ಸ್) (ನಿ), ಶ್ರೀ ರಾಮಲಿಂಗ್ ಘಾಳೆ, ಡಿ.ಎಸ್.ಪಿ. (ನಿ), ಶ್ರೀ ಕಲ್ಯಾಣ ರಾವ್ ಬಬ್ಲಾದ್ಕರ್, ಎಸ್.ಪಿ. (ನಿ), ಶ್ರೀ ಕೆ.ಹೆಚ್. ಹೊಸೂರು, ಡಿ.ಎಸ್.ಪಿ. (ನಿ), ಶ್ರೀ ಶಾಂತಪ್ಪ ಟಿ., ಪೊಲೀಸ್ ಇನ್ಸ್‌ಪೆಕ್ಟರ್ (ನಿ), ಶ್ರೀ ಜಿ.ವಿ. ತಿಮ್ಮೇಗೌಡ ಎಸ್.ಪಿ. (ನಿ) ರವರು ಹಾಜರಿದ್ದರು.**





**ಹಾಜರಿದ್ದ ಮೇಲ್ಕಂಡ ಹಿರಿಯ ಸದಸ್ಯರುಗಳಿಗೆ ಸುದೀರ್ಘ ಆಯಸ್ಸು, ಆರೋಗ್ಯ, ನೆಮ್ಮದಿ ಕೋರಿ ಸಂಘದ ವತಿಯಿಂದ ಸನ್ಮಾನಿಸಲಾಯಿತು.**







ಎಲ್ಲ ಸನ್ಮಾನಿತ ಹಿರಿಯ ಸದಸ್ಯರ ಪರವಾಗಿ ಶ್ರೀ ಕೆ. ಹೆಚ್. ಹೊಸೂರು ರವರು, ಗೌರವಾನ್ವಿತ ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿಗಳು, ಮಿತ್ರರು, ಬಂಧು-ಬಳಗದವರು ಸೇರಿದಂತೆ ಸರ್ವರಿಗೂ ನಮಸ್ಕರಿಸುತ್ತಾ, ಈ ದಿನ ಸಂತೋಷ ಪಡುವಂಥ ದಿನ, ಹೆಮ್ಮೆಯಿಂದ ಬೀಗುವಂತಹ ಸುದಿನ ಎನ್ನುತ್ತಾ, ಈ ಸನ್ಮಾನ ಸಮಾರಂಭ ಹಮ್ಮಿಕೊಂಡಿರುವ ಕಾರಣ ಎಲ್ಲರನ್ನೂ ಭೇಟಿಯಾಗಲು ಉಪಯೋಗಕರವಾಗಿದೆ ಎಂದು ನುಡಿದರು. ತಮ್ಮ ಅನುಭವ ಹಂಚಿಕೊಳ್ಳಲು ಅವಕಾಶ ಕಲ್ಪಿಸಿಕೊಟ್ಟ ಸರ್ವರಿಗೂ ವಂದಿಸಿದರು.







2024ನೇ ಸಾಲಿನಲ್ಲಿ ಪ್ರಶಸ್ತಿ ಪುರಸ್ಕೃತರಾದ ಶ್ರೀ ಜಿ.ಎ. ಬಾವ, ಡಿ.ಸಿ.ಪಿ (ನಿ) ಹಾಗೂ ಶ್ರೀ ಬಿ.ಕೆ. ಶಿವರಾಮ್. ಎ.ಸಿ.ಪಿ (ನಿ) ಇವರನ್ನು ಸಂಘದ ವತಿಯಿಂದ ಸನ್ಮಾನ ಮಾಡಲು ಆಹ್ವಾನಿಸಲಾಗಿತ್ತು. ಆದರೆ ಕಾರಣಾಂತರಗಳಿಂದ ಶ್ರೀ ಬಿ.ಕೆ. ಶಿವರಾಮ್ ರವರು ಸಭೆಗೆ ಹಾಜರಾಗಲು ಸಾಧ್ಯವಾಗಲಿಲ್ಲ.

ಶ್ರೀ ಜಿ.ಎ. ಬಾವಾ ರವರಿಗೆ ತಮ್ಮ ಸೇವಾವಧಿಯಲ್ಲಿ ತಮ್ಮ ಅದ್ಭುತ ಕಾರ್ಯನಿರ್ವಹಣೆಗಾಗಿ ಪೊಲೀಸ್ ಇಲಾಖೆ, ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ವತಿಯಿಂದ ಹಲವಾರು ಪ್ರಶಸ್ತಿಗಳನ್ನು ನೀಡಲಾಗಿದೆ. ಹಾಗೂ, ಶ್ರೀ ಜಿ. ಎ. ಬಾವಾ ರವರಿಗೆ ಇತ್ತೀಚೆಗೆ ಅಮೇರಿಕಾದಲ್ಲಿ ನಡೆದ 'ಅಕ್ಕ ಚಲನ ಚಿತ್ರೋತ್ಸವ' ಸಂದರ್ಭದಲ್ಲಿ "ವಿಶ್ವಮಾನ್ಯ ಕನ್ನಡಿಗ" ಗೌರವ ಪುರಸ್ಕೃತರಾದ ಮೇರೆಗೆ ಸಂಘದ ವತಿಯಿಂದ ಅಧ್ಯಕ್ಷರು ಮತ್ತು ಪದಾಧಿಕಾರಿಗಳಿಂದ ಗೌರವಿಸಿ, ಹೃದಯಸ್ಪರ್ಶಿಯಾದ ಸನ್ಮಾನ ಮಾಡಲಾಯಿತು.















ಹಿರಿಯ ಸದಸ್ಯರು ಹಾಗೂ ಸನ್ಮಾನಿತರಾದ ಶ್ರೀ ಮೆಹಬೂಬ್ ಜಾನ್ ರವರ ಪುತ್ರಿ ಶ್ರೀಮತಿ ಮಹಜಬೀನ್ ಬಾನು ರವರು ಪೋಲೀಸ್ ಅಧಿಕಾರಿಗಳ ಮಕ್ಕಳನ್ನು ಪ್ರತಿನಿಧಿಸುತ್ತಾ ಸಮಾಜಕ್ಕೆ ಪೋಲೀಸ್ ಅಧಿಕಾರಿಗಳ ಸೇವೆ ಮತ್ತು ಕೊಡುಗೆ ಅಪಾರವಾದುದು ಎಂದು ಎಲ್ಲಾ ಪೋಲೀಸ್ ಅಧಿಕಾರಿಗಳು ಮತ್ತು ಅವರ ಕುಟುಂಬದವರನ್ನು ಅಭಿನಂದಿಸಿದರು. ಅಂತಹ ಒಬ್ಬ ಪೋಲೀಸ್ ಅಧಿಕಾರಿಯ ಪುತ್ರಿಯಾಗಿರುವುದು ತಮ್ಮ ಭಾಗ್ಯ ಎಂದು ಹೆಮ್ಮೆಯಿಂದ ಸಭೆಗೆ ತಿಳಿಸಿದರು. ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಕಾರ್ಯಸಾಧನೆಗೆ ಅಭಿನಂದನೆಯನ್ನು ಸಲ್ಲಿಸುತ್ತಾ, ಸಂಘದ ಅಭಿವೃದ್ಧಿಗೆ ತಮ್ಮಿಂದ ಆಗುವ ಸಹಾಯವನ್ನು ಸಲ್ಲಿಸುವುದಾಗಿ ತಿಳಿಸಿ, ತಮ್ಮ ಭಾಷಣದ ಎರಡು ಮಾತುಗಳನ್ನು ಮುಗಿಸಿದರು.

ಶ್ರೀ ಜಿ.ಎ. ಬಾವ ರವರು ಸಂಘದ ಅಧ್ಯಕ್ಷರಾದ ಶ್ರೀ ಕೆ. ಬಿ. ಬೆಟ್ಟೇಗೌಡರವರು ಹಾಗೂ ಅವರ ತಂಡ ನಡೆಸುತ್ತಿರುವ ಕಾರ್ಯಗಳನ್ನು ಹೊಗಳಿದರು. ಹಿರಿಯ ಸದಸ್ಯರಿಗೆ, ಪ್ರಶಸ್ತಿ ಪುರಸ್ಕೃತರಿಗೆ ಸನ್ಮಾನಿಸುತ್ತಿರುವುದು ಒಳ್ಳೆಯ ಕೆಲಸ. ಅದರ ಜೊತೆಗೆ ನಿವೃತ್ತ ಪೊಲೀಸ್ ಅಧಿಕಾರಿಗಳ ಮಕ್ಕಳು ಹಾಗೂ ಮೊಮ್ಮಕ್ಕಳು ಶೈಕ್ಷಣಿಕ ಮತ್ತು ಉದ್ಯೋಗ ಕ್ಷೇತ್ರಗಳಲ್ಲಿ ಮಾಡಿರುವ ಸಾಧನೆಗಳನ್ನು ಗುರುತಿಸಿ ಸನ್ಮಾನಿಸಿದರೆ ಮತ್ತಷ್ಟು ಸಂತೋಷವನ್ನುಂಟು ಮಾಡುತ್ತದೆ ಎಂದು ಸಂಘಕ್ಕೆ ಸಲಹೆ ನೀಡುವುದರ ಮೂಲಕ ತಮ್ಮ ಅಭಿಪ್ರಾಯವನ್ನು ಹಂಚಿಕೊಂಡರು.









ಸಂಘದ ಸರ್ವತೋಮುಖ ಬೆಳವಣಿಗೆಗೆ, ಸಂಘದ ಸದಸ್ಯರ, ರಾಜ್ಯದ ನಿವೃತ್ತ ಪೊಲೀಸ್ ಅಧಿಕಾರಿ ಸಿಬ್ಬಂದಿಯವರ ಆರೋಗ್ಯ ಕಾಳಜಿ ಮತ್ತು ಕ್ಷೇಮಾಭಿವೃದ್ಧಿಗಾಗಿ ಸತತವಾಗಿ ಸಾಕಷ್ಟು ಆಸಕ್ತಿಯಿಂದ ಗಮನವಹಿಸಿ ಪ್ರಯತ್ನಗಳನ್ನು ಮಾಡಿ, ಗುರಿ ಮುಟ್ಟುವಲ್ಲಿ ಹಲವು ಯೋಜನೆಗಳನ್ನು ಮಂಜೂರು ಮಾಡಿಸಿಕೊಳ್ಳುವಲ್ಲಿ ಸಂಘದ ಅಧ್ಯಕ್ಷರ ನೇತೃತ್ವದಲ್ಲಿ ಸಂಘದ ಪದಾಧಿಕಾರಿಗಳೆಲ್ಲ ಸರ್ವ ಪ್ರಯತ್ನ ಮಾಡಿರುವುದನ್ನು ಸಭೆಗೆ ಕಾರ್ಯದರ್ಶಿಗಳು ತಿಳಿಸಿದರು. ಹಾಗೂ ಎಲ್ಲಾ ಗೌರವಾನ್ವಿತ ಸದಸ್ಯರೆಲ್ಲರೂ ಸಂಘಕ್ಕೆ ಒಳ್ಳೆಯ ಪ್ರೋತ್ಸಾಹ, ಸಹಕಾರ, ಸಲಹೆ ಮತ್ತು ಮಾರ್ಗದರ್ಶನ ನೀಡಿ ಸಂಘವನ್ನು ಮುನ್ನಡೆಸಿದ್ದಕ್ಕಾಗಿ ಎಲ್ಲರಿಗೂ ತುಂಬು ಹೃದಯದಿಂದ ಕೃತಜ್ಞತೆಗಳನ್ನು ಸಲ್ಲಿಸಿದರು. ಈ ಒಂದು ವರ್ಷದಲ್ಲಿ ಸಂಘದ ಎಲ್ಲಾ ಕಾರ್ಯ ಚಟುವಟಿಕೆಗಳಲ್ಲಿ ಸಕಾರಾತ್ಮಕವಾಗಿ, ಕ್ರಿಯಾಶೀಲರಾಗಿ ಭಾಗವಹಿಸಿ ಸಂಘದ ಪುರೋಭಿವೃದ್ಧಿಗೆ ಶ್ರಮಿಸುತ್ತಿರುವ ಸಂಘದ ಅಧ್ಯಕ್ಷರು ಮತ್ತು ಎಲ್ಲಾ ಪದಾಧಿಕಾರಿಗಳಿಗೆ ವಂದನೆಗಳನ್ನು ಸಲ್ಲಿಸಿದರು.



ಹಿಂದಿನ ಸಾಲಿನ "ಸರ್ವ ಸದಸ್ಯರ ಮಹಾಸಭೆ"ಯ ನಡಾವಳಿಗಳ ಸಂಕ್ಷಿಪ್ತ ಮಂಡನೆ ಹಾಗೂ ಕಾರ್ಯದರ್ಶಿಯವರ ವಿಸ್ತೃತ ವರದಿಯನ್ನು ಸಂಘದ ಕಾರ್ಯದರ್ಶಿಯವರಾದ ಶ್ರೀ ಎಮ್. ಶಂಕರಪ್ಪ ನವರು ಪ್ರಸ್ತುತಪಡಿಸಿದರು.



*ಅನಂತರ, ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಕಾರ್ಯದರ್ಶಿಗಳಾದ ಶ್ರೀ ಎಂ. ಶಂಕರಪ್ಪ ನವರು ಮಂಡಿಸಿದ ವಾರ್ಷಿಕ ವರದಿಯನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.*





ಸಂಘದ ಖಜಾಂಚಿಯಾದ ಶ್ರೀ ಕೆ.ಹೆಚ್. ಜಗದೀಶ್ ರವರು ಸಂಘದ ಆಡಿಟ್ ವರದಿ ಮತ್ತು 2024-25 ನೇ ಸಾಲಿನ ಅಂದಾಜು ಆಯ-ವ್ಯಯ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಿದರು.



ಸಂಘದ ಅಧ್ಯಕ್ಷರಾದ ಶ್ರೀ ಕೆ.ಬಿ. ಬೆಟ್ಟೇಗೌಡ ರವರು, ಸಂಘದ ಕಟ್ಟಡಕ್ಕೆ ಹೆಚ್ಚಿನ ಹಣ ಕ್ರೂಢೀಕರಿಸಬೇಕಾಗಿದ್ದು, ಇದಕ್ಕೆ ಎಲ್ಲಾ ಸದಸ್ಯರ ಸಹಕಾರವನ್ನು ಕೋರುತ್ತಾ, ಸಲಹೆಗಳನ್ನು ಆಹ್ವಾನಿಸಿದರು.

ಸದಸ್ಯರೆಲ್ಲರಿಗೂ ಸುಮಾರು ಒಂದು ಲಕ್ಷ ರೂಪಾಯಿಗಳನ್ನು ಭರಿಸುವ ಶಕ್ತಿ ಇದೆ. ಆದರೆ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ಸಂಘವು ಸುಮಾರು 200 ಸದಸ್ಯರಿಗೆ ಪತ್ರ ಬರೆದಿದ್ದು, 11 ಜನರು ಸಹಾಯಹಸ್ತವನ್ನು ನೀಡಿರುತ್ತಾರೆ ಎಂದು ಅಧ್ಯಕ್ಷರು ತಿಳಿಸಿದರು.

ಕಮ್ಯುಟೇಷನ್ ದಾವೆಯನ್ನು ನಡೆಸಲು ಆಗುವ ವಕೀಲರ ಖರ್ಚು ವೆಚ್ಚಗಳ ಬಗ್ಗೆ ಚರ್ಚಿಸಿ ಅದಕ್ಕೂ ಸಹ ಎಲ್ಲಾ ಸದಸ್ಯರ ಸಹಕಾರವನ್ನು ಕೋರಿದರು.

ಸಂಘದ ವತಿಯಿಂದ ತ್ರೈಮಾಸಿಕ ಪತ್ರಿಕೆಯನ್ನು ಹೊರತರುವುದರ ಬಗ್ಗೆ ಸದಸ್ಯರ ಸಲಹೆಗಳನ್ನು ಆಹ್ವಾನಿಸಿದರು.

*ಅದಕ್ಕೆ ಸಂಘದ ಸದಸ್ಯರಾದ ಶ್ರೀ ನಾಗರಾಜ್ ರವರು ಮಾಸಿಕ ಪತ್ರಿಕೆಯನ್ನು ಬಿಡುಗಡೆ ಮಾಡುವುದಾಗಿ ತಿಳಿಸಿ, ಅದರಲ್ಲಿ ಎಲ್ಲಾ ವಲಯ ಸಂಘಟನಾ ಕಾರ್ಯದರ್ಶಿಗಳಿಂದ ಕುಂದು ಕೊರತೆಗಳ ಬಗ್ಗೆ ಮಾಹಿತಿಯನ್ನು ತೆಗೆದುಕೊಂಡು ಅವುಗಳನ್ನು ನಿವಾರಿಸಬೇಕು ಎಂದು ಸಲಹೆ ನೀಡಿದರು.*



*ಸಂಘದ ಖಜಾಂಚಿಯವರಾದ ಶ್ರೀ ಕೆ.ಹೆಚ್. ಜಗದೀಶ್ ರವರು ಮಂಡಿಸಿದ ಆಡಿಟ್ ವರದಿ ಮತ್ತು 2024-25 ನೇ ಸಾಲಿನ ಅಂದಾಜು ಆಯ-ವ್ಯಯ ಪಟ್ಟಿಯನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.*



ಅಧ್ಯಕ್ಷರು ಸದಸ್ಯರ ಸಲಹೆ ಸೂಚನೆಗಳನ್ನು ಅಳವಡಿಸಲು ಪ್ರಯತ್ನ ಮಾಡುತ್ತೇವೆ ಎಂದು ತಿಳಿಸಿದರು.





20ನೇ ಸರ್ವ ಸದಸ್ಯರ ಸಭೆಯ ಕಾರ್ಯಕ್ರಮದಲ್ಲಿ ಭಾಗವಹಿಸಿರುವ ಎಲ್ಲಾ ಸರ್ವ ಸದಸ್ಯರ ಸಲಹೆ, ಸೂಚನೆಗಳು, ಪ್ರೋತ್ಸಾಹ ಮತ್ತು ಸಹಕಾರವನ್ನು ಗೌರವಿಸುತ್ತಾ, ಸಲಹೆ – ಸೂಚನೆಗಳು ನಮಗೆ ಶಕ್ತಿ ಎಂದು ನುಡಿದರು.

ಸಭೆಯಲ್ಲಿ ಉಪಸ್ಥಿತರಿದ್ದ ಸರ್ವ ಸದಸ್ಯರಿಗೂ ತಮ್ಮ ಹೃತ್ಪೂರ್ವಕವಾದ ಧನ್ಯವಾದಗಳನ್ನು ಸಲ್ಲಿಸುತ್ತಾ ಎಲ್ಲರಿಗೂ ಆಭಾರಿಯಾಗಿದ್ದೇವೆ ಎಂದು ತಮ್ಮ ಅಧ್ಯಕ್ಷೀಯ ಭಾಷಣವನ್ನು ಮುಗಿಸಿದರು.



ಸಂಘದ ವತಿಯಿಂದ ಸನ್ಮಾನ ಸ್ವೀಕರಿಸಿದ ಪ್ರಶಸ್ತಿ ಪುರಸ್ಕೃತರಿಗೂ ಸಹ ಸಂಘದ ವತಿಯಿಂದ ಹಾಗೂ ಎಲ್ಲರ ಪರವಾಗಿ ಹೃತ್ಪೂರ್ವಕವಾದ ಧನ್ಯವಾದಗಳನ್ನು ತಿಳಿಸಿದರು.

ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳಿಗೂ, ಮಾಧ್ಯಮ ಮಿತ್ರರಿಗೂ ಹಾಗೂ ಸಂಘದ ನೌಕರರಿಗೂ ಸಹ ತಮ್ಮ ಹೃತ್ಪೂರ್ವಕವಾದ ವಂದನೆಗಳನ್ನು ಸಲ್ಲಿಸುತ್ತಾ ತಮ್ಮ ವಂದನಾರ್ಪಣೆಯನ್ನು ಮುಗಿಸಿದರು.

ಸಂಘದ ಅಧ್ಯಕ್ಷರಾದ ಶ್ರೀ ಕೆ. ಬಿ. ಬೆಟ್ಟೇಗೌಡರವರು, ಸಭೆಯಲ್ಲಿ ಹಾಜರಿದ್ದ ಹಿರಿಯ ಅಧಿಕಾರಿಯಾದ ಶ್ರೀ ಎಸ್.ಬಿ.ವಾಣಿ ರವರಿಗೆ 90 ವರ್ಷಕ್ಕೂ ವಯಸ್ಸು ಹೆಚ್ಚಾಗಿದ್ದು, ಅವರು ಶತಾಯು ಆಗಲಿ ಎಂದು ಆಶಿಸಿದರು. ಹಿರಿಯ ಸದಸ್ಯರೆಲ್ಲರೂ ಒಂದೊಂದು Encyclopaedia ಇದ್ದಂತೆ ಎಂದು ಹೊಗಳಿದರು. ಈ ಹಿರಿಯ ಚೇತನಗಳು ಇನ್ನೂ ಹೆಚ್ಚು ಕಾಲ ಆರೋಗ್ಯವಾಗಿ ನೆಮ್ಮದಿಯಿಂದ ಬದುಕಿ, ಶತಾಯುಗಳಾಗಲಿ ಎಂದು ಆಶಿಸಿದರು.



ಸಂಘದ ಜಂಟಿ ಕಾರ್ಯದರ್ಶಿಗಳಾದ ಶ್ರೀ ಬಿ. ಎನ್ ಶಾಮಣ್ಣ ರವರಿಂದ ಮೊದಲಿಗೆ ಸರ್ವ ಸದಸ್ಯರ ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದ ಸಂಘದ ಅಧ್ಯಕ್ಷರಾದ ಶ್ರೀ ಕೆ. ಬಿ. ಬೆಟ್ಟೇಗೌಡ ರವರಿಗೆ, ಉಪಾಧ್ಯಕ್ಷರುಗಳು, ಕಾರ್ಯದರ್ಶಿಗಳೂ ಸೇರಿದಂತೆ, ಸಂಘದ ಎಲ್ಲ ಪದಾಧಿಕಾರಿಗಳ ಪರವಾಗಿ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸಿದರು.

ಸಭೆಯಲ್ಲಿ ಹಾಜರಿದ್ದ ಎಲ್ಲಾ ಹಿರಿಯ ಸದಸ್ಯರಿಗೂ ಸಂಘದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳ ಪರವಾಗಿ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸಿದರು. ಸಂಘದ ಎಲ್ಲ ಪದಾಧಿಕಾರಿಗಳಿಗೆ ಸಂಘದ ವತಿಯಿಂದ ಹೃತ್ಪೂರ್ವಕವಾದ ಧನ್ಯವಾದಗಳನ್ನು ಸಲ್ಲಿಸಿದರು.






ಇದೇ ಸಂದರ್ಭದಲ್ಲಿ ಸಂಘದ ಮುನ್ನಡೆಗಾಗಿ ಮಾರ್ಗದರ್ಶನ ನೀಡಿದ ಅಧ್ಯಕ್ಷರಾದ ಶ್ರೀ ಕೆ.ಬಿ. ಬೆಟ್ಟೇಗೌಡ ರವರನ್ನು ಸಂಘದ ಪದಾಧಿಕಾರಿಗಳೆಲ್ಲ ಸೇರಿ ಸರಳವಾಗಿ ಸನ್ಮಾನಿಸಲಾಯಿತು.



ಸಭಾ ಕಾರ್ಯಕ್ರಮದ ನಂತರ ಎಲ್ಲರೂ ಸಾಮೂಹಿಕವಾಗಿ ರಾಷ್ಟ್ರಗೀತೆಯನ್ನು ಹಾಡುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಿದರು.






ಕೆಲವು ಫೋಟೋಗಳು;














ಸಭಾ ಕಾರ್ಯಕ್ರಮದ ನಂತರ ಎಲ್ಲರೂ ಸಾಮೂಹಿಕವಾಗಿ ರಾಷ್ಟ್ರಗೀತೆಯನ್ನು ಹಾಡುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಿದರು.



ಇದೇ ಸಂದರ್ಭದಲ್ಲಿ ಸಂಘದ ಮುನ್ನಡೆಗಾಗಿ ಮಾರ್ಗದರ್ಶನ ನೀಡಿದ ಅಧ್ಯಕ್ಷರಾದ ಶ್ರೀ ಕೆ.ಬಿ. ಬೆಟ್ಟೇಗೌಡ ರವರನ್ನು ಸಂಘದ ಪದಾಧಿಕಾರಿಗಳೆಲ್ಲ ಸೇರಿ ಸರಳವಾಗಿ ಸನ್ಮಾನಿಸಲಾಯಿತು.



ಇಡೀ ಕಾರ್ಯಕ್ರಮದ ನವಳಿಗಳನ್ನು ಟಿಪ್ಪಣಿ ಮಾಡುತ್ತಿರುವುದು.



ಕಾರ್ಯಕ್ರಮದ ಅಂತ್ಯದಲ್ಲಿ ಎಲ್ಲರಿಗೂ ಆಯೋಜಿಸಿದ್ದ ಪುಷ್ಕಳ ಭೋಜನವನ್ನು ಆಗಮಿಸಿದ್ದ ಸದಸ್ಯರೆಲ್ಲ ಸವಿದು ಸಂಭ್ರಮಿಸಿದರು.






























ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಮಹಾಸಭೆ ಕಾರ್ಯಕ್ರಮ ಸಂಪನ್ನ ವಾಗಿರುತ್ತದೆ.

NAMASTE

ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ (ರಿ.), ಬೆಂಗಳೂರು – 560 023.

* * * * *